ನೋಡಿದರೆ ಅಲ್ಲಿ ಎಲ್ಲವೂ ಬದಲಾಗಿತ್ತು. ಕ್ವಾಟ್ರರ್ಸ್ ಇದ್ದ ಜಾಗದಲ್ಲಿ ಹೊಸ ಹೊಸ ಬಹುಮಹಡಿ ಕಟ್ಟಡಗಳು ಎದ್ದಿದ್ದವು, ಇನ್ನಷ್ಟು ಕಟ್ಟಡಗಳ ಕಾಮಗಾರಿ ನಡೆಯುತ್ತಾ ಇತ್ತು. ಅಲ್ಲೇ ಎಲ್ಲೋ ಗೇಟ್‌ಕೀಪರೋ, ವಾಚ್‌ಮನ್ನೋ ಆಗಿದ್ದಾನಂತೆ ಅಪ್ಪ. ವಿಚಾರಿಸಲು ಹೋಗಲಿಲ್ಲ. ಅಮ್ಮನನ್ನು ಹುಡುಕಿ ಹಿಡಿದೆ. ''ನನ್ನೊಟ್ಟಿಗೆ ಇರು, ಬರ್ತಿಯಾ?'' ಎಂದಷ್ಟೇ ಕೇಳಿದೆ. ಮರುಮಾತಿಲ್ಲದೆ ಹೊರಟು ಬಂದಳು. ಅಪ್ಪನ ಬಗ್ಗೆಯಾಗಲೀ, ಅವನ ಸೊಸೆಯ ಬಗ್ಗೆಯಾಗಲೀ ತಲೆ ಕೆಡಿಸಿಕೊಳ್ಳಲಿಲ್ಲ. ತನ್ನ ಪ್ರೀತಿಯ 'ಮೌಶಿ'ಯನ್ನು ಕರೆದುಕೊಂಡು ಬಂದಿದ್ದಕ್ಕೆ ದೀಪಕ್ ತುಂಬ ಖುಷಿ ಪಟ್ಟಿದ್ದ. ನಮ್ಮ ವಾಸಕ್ಕೆ ನಾನೂರು ಸ್ಕ್ವೇರ್ ಫೀಟಿನ ಫ್ಲ್ಯಾಟಿನಲ್ಲಿ ವ್ಯವಸ್ಥೆ ಮಾಡಿದ. ಅದು ಅವನದೇ. ಈಗ ಅವನ ಸಂಸಾರ ಬೇರೆ ದೊಡ್ಡ ಫ್ಲ್ಯಾಟಿನಲ್ಲಿದೆ. ಮತ್ತೇನಿಲ್ಲ, ಮೋಸ, ದಗಲ್ಬಾಜಿ ಇಲ್ಲದೆ ನಿಯತ್ತಿನಿಂದ ಕೆಲಸ ಮಾಡಿದೆ. ಅದಷ್ಟೇ ನಾನವನಿಗೆ ಕೊಟ್ಟದ್ದು. ಸಂಬಳವನ್ನಂತೂ ನಾನು ಕೇಳಲೇ ಇಲ್ಲ. ಎರಡೋ ಮೂರೋ ದಿನಕ್ಕೊಮ್ಮೆ ಸ್ವಲ್ಪ ಕ್ಯಾಶ್ ನನ್ನ ಕೈಗೆ ಕೊಡ್ತಾ ಇದ್ದ. ಎಣಿಸದೆ ಪಡೆದುಕೊಳ್ಳುತ್ತಿದ್ದೆ. ಅಮ್ಮನಿಗೂ, ಹೆಂಡತಿಗೂ ಸ್ವಲ್ಪ ಕೊಟ್ಟು ನಾನು ಕೊಂಚ ಉಳಿಸಿಕೊಳ್ಳುತ್ತಿದ್ದೆ. ಮಕ್ಕಳ ಬೇಡಿಕೆಗಳನ್ನು ಪೂರೈಸಲು ಉಪಯೋಗಕ್ಕೆ ಬರ್ತಿತ್ತು. ನನ್ನ ಮನೆ ಖರ್ಚುಗಳನ್ನು ನೋಡಿಕೊಳ್ಳುವುದು ಅವನೇ. ದೀಪಾವಳಿಗೆ ನಮಗೆಲ್ಲರಿಗೆ ಹೊಸ ಡ್ರೆಸ್ಸು, 'ಮೌಶಿ'ಗೆ ಒಂದು ಜೊತೆ ಸೀರೆ ಕೊಡ್ತಾ ಇದ್ದ. ''ಇದೆಲ್ಲಾ ಯಾಕೆ, ನಾನು ನನ್ನ ಬ್ಯಾಂಕಿನ ಬಡ್ಡಿಯಿಂದ ತಗೊಳ್ತಾ ಇದ್ದೆ'' ಅಂದಿದಕ್ಕೆ, ''ಅದನ್ನು ನಿನ್ನ ಮಕ್ಕಳ ಭವಿಷ್ಯ ರೂಪಿಸಲು ಉಪಯೋಗಿಸು'' ಅಂದ. ಸಂಬಳ ಕೊಡು ಅಂತ ನಾನು ಕೇಳಲೇ ಇಲ್ಲ. ಕೈಯಲ್ಲಿ ಕಾಸಿಲ್ಲದೇ ಬದುಕುವುದು ಮೊದಲಿನಿಂದಲೇ ಅಭ್ಯಾಸವಾಗಿತ್ತು ನನಗೆ.

ತಿಂಗಳು ತಿಂಗಳು ಸಂಬಳ ಬರುತ್ತಿದ್ದ ಸಮಯದಲ್ಲಿಯೂ ನನ್ನ ಕೈಯಲ್ಲಿ ಕಾಸಿರುತ್ತಿರಲಿಲ್ಲ. ಪೂರ್ತಿ ಸಂಬಳವನ್ನು ಅಪ್ಪ ಇಟ್ಟುಕೊಳ್ತಾ ಇದ್ದದ್ದು. ನನ್ನ ಸಣ್ಣಪುಟ್ಟ ಖರ್ಚಿಗೂ ತತ್ವಾರ ಆಗ್ತಾ ಇತ್ತು. ಕೆಲವು ತಿಂಗಳು ಸಹಿಸಿಕೊಂಡು ದಿನ ಕಳೆದೆ. ದೀಪಕನಿಗೆ ಅದು ಹೇಗೆ ತಿಳಿಯಿತೋ, ಒಂದು ದಿನ ನನ್ನೊಂದಿಗೆ ಮನೆಗೆ ಬಂದು, ''ಕಾಕಾ, ಇವ್ನಿಗೆ ಖರ್ಚಿಗೆ ಅಂತ ಹಣ ಕೊಡಿ. ದುಡಿದು ತಂದು ಹಾಕ್ತಾ ಇಲ್ವಾ? ಕೈಯಲ್ಲಿ ಸ್ವಲ್ಪವೂ ಕಾಸಿಲ್ಲ ಅಂದ್ರೆ ಹೇಗೆ?'' ಎಂದು ನನಗೆ ಕಾಸು ಕೊಡಿಸಿದವನು ಇವನೇ. ''ಇನ್ನು ತಿಂಗಳು ತಿಂಗಳು ಹಫ್ತಾ ವಸೂಲಿಗೆ ಬರುವ ಹಾಗೆ ಮಾಡಬೇಡಿ ಕಾಕಾ'' ಅಂತಂದು ಬಿಟ್ಟ. ಒಂದು ರೀತಿಯಲ್ಲಿ ಎಚ್ಚರಿಕೆ ಅದು. ಇವ ಮಾತಾಡುವುದೇ ಹಾಗೆ. ಅಮ್ಮನನ್ನು ಕರೆದುಕೊಂಡು ಬಂದಿದ್ದಾಗ ಕೇಳಿದ್ದ, ''ಹೆಂಡ್ತಿಯನ್ನು ಯಾಕೆ ಬಿಟ್ಟು ಬಂದೆ?'' ಅಂತ. ''ಆಕೆ ನನಗೆ ಹೆಂಡ್ತಿಯಾಗಿರ್ಲಿಲ್ಲ, ಮತ್ಯಾಕೆ?'' ಅಂದಿದ್ದೆ. ಆಮೇಲೆ ಪ್ರಶ್ನಿಸಲಿಲ್ಲ. ಆದರೂ ಆಗಾಗ ರೇಗಿಸ್ತಾ ಇದ್ದ, ''ಒಂದು ಹೆಂಡ್ತಿಯನ್ನು ಇಟ್ಟುಕೋ ಮಾರಾಯ, ಎಷ್ಟು ದಿನ ಅಂತ ಮುಷ್ಟಿ ಹೊಡೀತಾ ಇರ್ತೀಯಾ?'' ಅಂತ. ಸಿಟ್ಟು ಬರ್ತಿತ್ತು ನನಗೆ. ನನ್ನ ಬಗ್ಗೆ ಅಷ್ಟು ಕಾಳಜಿ ಇದ್ದವನು ಮಗ ಮಿಲಿಟ್ರಿ ಸೇರ್ತೇನೆ ಅಂದಾಗ ಹಿಂದು ಮುಂದು ಯೋಚಿಸದೆ ಒಪ್ಪಿಗೆ ಕೊಟ್ಟ. ಇವ ಇಷ್ಟು ಬೇಜವಾಬ್ದಾರಿಯಾದನೇ ಅಂತ ನನಗೆ ಬಹಳ ದುಃಖವಾಗಿತ್ತು. ಕಳಿಸಬೇಡ ಅಂದೆ. ನನ್ನ ಮಾತಿಗೆ ಬೆಲೆ ಕೊಡ್ಲಿಲ್ಲ. ಮನೆಗೆ ಹೋಗಿ ವೈನಿಯನ್ನೂ ಮಾತಾಡಿಸಿದೆ. ''ಬೇರೆ ಯೋಚನೆ ಮಾಡಿ, ಪ್ರಾಯ ಆದ ಮೇಲೆ ಒಟ್ಟಿಗೆ ಯಾರಿರ್ತಾರೆ ಅಂತ ಬೇಡ್ವಾ?'' ಇಬ್ಬರೂ ಒಂದೇ ನಮುನೆಯವರು. ''ಹೋಗಲಿ ಬಿಡು, ಮಕ್ಕಳು ದೊಡ್ಡವರಾದ ಮೇಲೆ ಅವರ ಇಷ್ಟದ ಹಾಗೆ ನಾವು ನಡೆದುಕೊಳ್ಳಬೇಕು. ಅಷ್ಟಕ್ಕೂ ನಾವು ಮುದುಕರಾದ ಮೇಲೆ ಮಕ್ಕಳು ನಮ್ಮ ಜೊತೆಯಲ್ಲೇ ಇರ್ಬೇಕು ಅಂತ ನಾವು ಯಾಕೆ ಬಯಸುವುದು?'' ಎಂದು ನನ್ನ ಬಾಯಿ ಮುಚ್ಚಿಸಿದರು. ನನ್ನ ಹೆಣ್ಣುಮಕ್ಕಳಿಗೆ ಆಕೆ ಪ್ರೀತಿಯ 'ಮಾನ್ಸಿ(ಮಾನಸಿ) ಕಾಕಿ'.

ದೀಪಕ್ ಆಗಾಗ ನನ್ನನ್ನು ಛೇಡಿಸ್ತಾ ಇದ್ದನಲ್ಲ, ಮದುವೆ ಮಾಡಿಕೋ ಅಂತ. ಅವನ ತೋಟಕ್ಕೆ ಹೋಗಿ ಮೂರು ಮೂರು ತಿಂಗಳು ಅಲ್ಲಿಯೇ ಇರ್ತಾ ಇದ್ದೆನಲ್ಲ. ಆಗ ಈಕೆಯ ಪರಿಚಯವಾಯಿತು.